**Q.P. Code – 32403**

# Fourth Semester B.A./B.S.W./B.F.A. Degree Examination, April/May 2019

*(CBCS – Semester Scheme)*

**ಕನ್ನಡ ಭಾಷೆ**

## Paper IV – ಹುಳಿ ಮಾವಿನ ಮರ ಮತ್ತು ಪ್ರಬಂಧ ಸಂಚಯ – 4

*Time : 3 Hours]* *[Max. Marks : 90*

ಭಾಗ – 1

ಆತ್ಮಕಥೆ : ಹುಳಿ ಮಾವಿನ ಮರ

I. (ಅ) **ಒಂದರ** ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಸ್ವಾತಂತ್ರ್ಯ ಬಂದ ವರ್ಷ ಪರೀಕ್ಷೆಗಳೇ ಇಲ್ಲದೇ ತೇರ್ಗಡೆ ಮಾಡಿದರು. ವಿದ್ಯಾರ್ಥಿಗಳು, ಅಧ್ಯಾಪಕರು ಬಹು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು ಎಂಬುದು ಸರ್ಕಾರ ಕೊಟ್ಟ ಕಾರಣ; ಆದರೆ ಅಲ್ಲಿಯವರೆಗೆ ಪ್ರತಿಯೊಬ್ಬ ರಾಜಕಾರಣಿಯೂ ವೇದಿಕೆಯಿಂದ 'ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಭ್ಯಾಸದಲ್ಲಿ ಆಸಕ್ತಿ ವಹಿಸಬೇಕು, ರಾಜಕೀಯಕ್ಕೆ ಇಳಿಯಬಾರದು' ಅನ್ನುತ್ತಿದ್ದರು. ಅವರ ಮಾತನ್ನು ಮೀರಿ ವಿದ್ಯಾರ್ಥಿಗಳು ರಾಜಕೀಯಕ್ಕೆ ಧುಮುಕಿದ್ದರು.

2. ಕಬ್ಬಿನ ಗದ್ದೆ, ಬತ್ತ ಗದ್ದೆ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಹರಿಯುತ್ತಿದ್ದ ನೀರು, ಹುಲ್ಲಿನ ವಾಸನೆ, ಸಹಸ್ರಾರು ಪ್ರಾಣಿಗಳ ಸದ್ದು, ಇವುಗಳೊಂದಿಗೆ ಜೀವಂತ ಸಂಬಂಧವಿರಿಸಿ ಕೊಂಡಿದ್ದರೂ ನಿರ್ಲಿಪ್ತರಾಗಿ ತಮ್ಮ ಕೆಲಸ ತಾವು ಮಾಡಿಕೊಂಡು ಹೋಗುತ್ತಿದ್ದ ಗ್ರಾಮಸ್ಥರು, ಇಲ್ಲಿಯ ಜಗಳ, ಮಾತು, ಗಾದೆ, ನುಡಿಕಟ್ಟು ಎಲ್ಲದರ ಮೂಲಕ ನನ್ನನ್ನು ಸುತ್ತುವರಿದಿದ್ದ ಪರಿಸರ – ಇವೆಲ್ಲವೂ ಕಣ್ಮರೆಯಾಗುವಂತೆ ಚಿಂತೆ ಶುರುವಾಯಿತು.

(ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. ನನ್ನನ್ನು ಹಡೆಯುವಾಗ ಅಂಟಿದ ರೋಗಗಳೆಲ್ಲ ಪೀಡಿಸಿ ಅವ್ವ ಗೂನಾಗಿದ್ದಳು.
2. "ಇಲ್ಲ ಸರ್, ಸೀಟ್ ಸಿಗಲಿಕ್ಕಿಲ್ಲ, ನಂಬರ್ ಕಮ್ಮಿ ಬಂದಿದೆ".
3. "ನಾನು ನಿಮ್ಮ ಲೆಕ್ಚರರ್, ಮಿಸ್ಟರ್ ಚಂದ್ರಪ್ಪ".

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಲಂಕೇಶರ ಊರು ಯಾವುದು?
2. ಮುದುವಾಲದ ಮೇಷ್ಟ್ರು ಯಾರು?
3. ಪೋಸ್ಟ್ ಮಾಸ್ಟರ್ ಮಗಳ ಹೆಸರೇನು?
4. ಶಿವಾನಂದರ ಪುಸ್ತಕದ ಹೆಸರನ್ನು ತಿಳಿಸಿ.
5. ಲೇಖಕರ ಮನೆ ದೇವರು ಯಾವುದು?

(ಈ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 2 = 4)**

1. ಹನುಮಿ
2. ಹಾರ್‍ನಳ್ಳಿ
3. ಹೆಡ್ ಮಾಸ್ಟರ್ ಸೂರಪ್ಪ

II. (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2 × 5 = 10)**

1. ಶಿವಪ್ಪನವರ ವ್ಯಕ್ತಿತ್ವವನ್ನು ಬರೆಯಿರಿ.
2. ಕುಸ್ತಿ ಪ್ರಸಂಗದದ ಬಗ್ಗೆ ಬರೆಯಿರಿ.
3. ನಸುಗುನ್ನಿ ಕಾಯಿಪುಡಿ ಪ್ರಸಂಗದ ಸ್ವಾರಸ್ಯ ಬರೆಯಿರಿ.

(ಆ) **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಲೇಖಕರಿಗಾದ ಪ್ರಾಥಮಿಕ ಶಾಲಾ ದಿನಗಳ ಅನುಭವಗಳನ್ನು ಬರೆಯಿರಿ.
2. ಮುದುವಾಲದ ಸಣ್ಣೀರಪ್ಪ ಮಾಸ್ತರರ ವ್ಯಕ್ತಿತ್ವವನ್ನು ಬರೆಯಿರಿ.
3. ತ್ಯಾಜ್ಯವಳ್ಳಿ, ಚಂದ್ರಶೇಖರಪ್ಪ, ರಂಗಿ, ಬಸಕ್ಕ – ಇವರಲ್ಲಿ ಇಬ್ಬರ ಪಾತ್ರ ಪರಿಚಯಿಸಿ.

ಭಾಗ – 2

ಪ್ರಬಂಧ ಸಂಚಯ

III. (ಅ) **ಒಂದರ** ಸ್ವಾರಸ್ಯವನ್ನು ಬರೆಯಿರಿ : **(1 × 5 = 5)**

1. ಬೇರೆ ಮುದ್ದಿನ ಹೆಸರೊಂದನ್ನು ಇಟ್ಟುಕೊಳ್ಳುವುದು ಅನಿವಾರ್ಯ, ಅದು ಹುಟ್ಟು ಹೆಸರಿನ ರೂಪಾಂತರವಿರಬಹುದು; ಅದಕ್ಕಿಂತ ಕರ್ಕಶವಾಗಿ ಕಂಡರೂ ಕಾಣಬಹುದು; ನಮ್ಮ ಮೆಚ್ಚುಗೆ ಪಡೆದ ಯಾವುದೋ ವಸ್ತುವಿನ, ಪ್ರಾಣಿಯ, ಹಕ್ಕಿಯ ಹೆಸರಿರಬಹುದು. ಯಾವುದೇ ಆಗಲಿ ಅದರ ರೂಪವನ್ನು ಬೇರೊಬ್ಬರು ಯಾರೂ ನಿರ್ಣಯಿಸಲಾರರು, ಆ ಹೆಸರು ಪ್ರೇಮದ ಕುಲುಮೆಯಿಂದ ತಾನಾಗಿ ಹಾರಿದ ಕಿಡಿ; ಮೇಘ ಮಿಲನದಿಂದ ಮಿಂಚು ಹೊಳೆದಂತೆ ಪ್ರಿಯ ಪ್ರೇಯಸಿಯರ ಹೃದಯ ಮಿಲನದಿಂದ ಮೂಡಿ ಬರುತ್ತದೆ.

2. ಅಲ್ಲಲ್ಲಿ ಸಾಲ ತಂದು ಒಪ್ಪವಾಗಿ ಸಂಸಾರ ನಡೆಸಿ ಈ ಆತ್ಮ ಗೌರವನ ಬೊಜ್ಜು ಬೆಳೆಸುತ್ತೇವೆ. ಆದರೆ ಒಂದು ಕಾಲಕ್ಕೆ ಸಾಲವು ಸಿಂಹದಂತೆ ಮೇಲೆದ್ದು ಮರ್ಯಾದೆಯ ನಂದಿಯ ಕುತ್ತಿಗೆಗೆ ಬಾಯಿ ಹಾಕಲು ಮುಂದಾಗುತ್ತದೆ. ಅದನ್ನು ಹೊಡೆದುರುಳಿಸಬೇಕಾದ್ದು ನಮ್ಮ ಮೊದಲ ಕರ್ತವ್ಯ. ಆದರೆ ನಮ್ಮ ವ್ಯರ್ಥ ಸಾಹಸವನ್ನು ಕಂಡು ನಗುತ್ತಾ ಸಿಂಹವು 'ಅಲಂ ಮಹಿಪಾಲ ತವ ಕ್ರಮೇಣ' ಎಂದು ಬಾಯಿ ಮುಚ್ಚಿಸಿದಾಗ ಬಲವಿಳಿದ ಸರ್ಪದಂತೆ ಶಕ್ತಿಹೀನರಾಗಿ ಒರಗುತ್ತೇವೆ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಎ.ಎನ್. ಮೂರ್ತಿರಾವ್‌ರವರ ಲೇಖನವೊಂದರ ಹೆಸರನ್ನು ತಿಳಿಸಿ.
2. ಅ.ರಾ. ಮಿತ್ರ ಅವರ ಪ್ರಬಂಧ ಲೇಖನದ ಹೆಸರು ಯಾವುದು?
3. 'ಭಾರತೀಯ ಕಾವ್ಯ ಮೀಮಾಂಸೆ'ಯ ಕರ್ತೃ ಯಾರು?
4. ಪು.ತಿ.ನ. ಅವರ ಪೂರ್ಣ ಹೆಸರನ್ನು ತಿಳಿಸಿ.
5. 'ಚಲಿಸುವ ನಿಘಂಟು' ಎಂದು ಯಾರನ್ನು ಕರೆಯುತ್ತಾರೆ?

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 5 = 10)**

1. ಅ.ರಾ. ಮಿತ್ರ
2. ತೀ.ನಂ. ಶ್ರೀ
3. ಗರುಡಗಂಬದ ದಾಸಯ್ಯ

IV. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. 'ನೆಗಡಿ' ಎಂಬ ಲೇಖನದಲ್ಲಿ ಲೇಖಕರಿಗಾದ ಮಾನಸಿಕ ಕಿರಿಕಿರಿ, ತಳಮಳಗಳನ್ನು ಕುರಿತು ಬರೆಯಿರಿ.
2. 'ಗ್ರಹಣವು ನೈಸರ್ಗಿಕ ಪ್ರಕ್ರಿಯೆ' ಎಂಬುದನ್ನು ಸೋದಾಹರಣವಾಗಿ ವಿವರಿಸಿ.
3. 'ಧೇನು ಕೋಪಾಖ್ಯಾನ' ಲೇಖನದ ಸ್ವಾರಸ್ಯವನ್ನು ಬರೆಯಿರಿ.

---